**ಸಾಕ್ಷಿಯನ್ನು ಇಂದು ದಿನಾಂಕಃ 23-01-2026 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು**
**ಪಾಟೀ ಸವಾಲುಃ ವಾದಿ ಪರ ವಕೀಲರಿಂದ**

2 ನೇ ಪ್ರತಿವಾದಿಯು ನನ್ನ ಗಂಡನ ತಮ್ಮನಾಗಬೇಕು. ನನ್ನ ಗಂಡನ ಹೆಸರು ಮೋತಿಲಾಲ. ಸಿದ್ದರಾಮ ರವರು ನನ್ನ ಗಂಡನ ಅಣ್ಣ. ರಾಮಪ್ಪ ನನ್ನ ಗಂಡನ ಅಣ್ಣನಾಗಬೇಕು. ವಸಂತ ರವರು ನನ್ನ ಗಂಡನ ದೊಡ್ಡ ಅಣ್ಣನ ಮಗ. ದಾವಾ ಜಮೀನು ಸರ್ವೆ ನಂ.49 . ಸದರಿ ಜಮೀನು ಒಟ್ಟು 8 ಎಕರೆ 13 ಗುಂಟೆ ಇರುತ್ತದೆ. ನನ್ನ ಗಂಡನ ಅಣ್ಣತಮ್ಮಂದಿರು ಸದರಿ 8 ಎಕರೆ 13 ಗುಂಟೆಯಲ್ಲಿ ಪಾಲು ಮಾಡಿಕೊಂಡಿರುತ್ತಾರೆ ಎಂದರೆ ಹೌದು. ಸದರಿ ವಾಟ್ನಿ ಪ್ರಕಾರ ಮೋತಿರಾಮಗೆ 1 ಎಕರೆ 15 ಗುಂಟೆ, ರಾಮಪ್ಪನಿಗೆ 1 ಎಕರೆ 15 ಗುಂಟೆ, ಸಣ್ಣ ಲಕ್ಷ್ಮಣನಿಗೆ 1 ಎಕರೆ 15 ಗುಂಟೆ, ವಸಂತನಿಗೆ 1 ಎಕರೆ 15 ಗುಂಟೆ ಹಾಗೂ ಸಿದ್ದರಾಮನಿಗೆ 2 ಎಕರೆ 4 ಗುಂಟೆ ಬಂದಿರುತ್ತದೆ ಎಂದರೆ ಹೌದು. ಸದರಿ ಪಾಲುವಾಟ್ನಿ ಪ್ರಕಾರ ಸದರಿಯವರು ಪ್ರತ್ಯೇಕವಾಗಿ ತಮ್ಮ ಜಮೀನುಗಳನ್ನು ಉಳುಮೆ ಮಾಡುತ್ತಿದ್ದಾರೆ ಎಂದರೆ ಹೌದು. ನಾನು ಪುಣೆಯಲ್ಲಿ ಖಾಯಂ ತರೀಕವಾಗಿ ಇರುತೇನೆ ಎಂದರೆ ಸಾಕ್ಷಿಯು ರಾಂಪುರದಲ್ಲಿ ನನ್ನ ಮನೆ ಇದ್ದು ,ನನ್ನ ಮಕ್ಕಳು ಪುಣೆಯಲ್ಲಿ ಇರುತ್ತಾರೆ ಎಂದು ನುಡಿಯುತ್ತಾರೆ. 2 ನೇ ಪ್ರತಿವಾದಿಗೆ ಒಬ್ಬಳು ಮಗಳು ಮತ್ತು 3 ಜನ ಗಂಡು ಮಕ್ಕಳು ಇರುತ್ತಾರೆ. 2 ನೇ ಪ್ರತಿವಾದಿಗೆ 1 ಎಕರೆ 15 ಗುಂಟೆ ಹೊರತುಪಡಿಸಿ ಬೇರೆ ಯಾವುದೇ ಜಮೀನು ಇಲ್ಲ ಎಂದರೆ ಹೌದು. 2 ನೇ ಪ್ರತಿವಾದಿಯು ತನ್ನ ಜಮೀನಿನಲ್ಲಿ ಉತ್ಪನ್ನ ಬರುತ್ತಿರಲಿಲ್ಲವೆಂದು 2 ನೇ ಪ್ರತಿವಾದಿಯು ಸದರಿ ಜಮೀನನ್ನು ನನಗೆ ಲಾವಣಿ ಮಾಡಲು ಕೊಟ್ಟಿದ್ದನು ಎಂದರೆ ಹೌದು. 2 ನೇ ಪ್ರತಿವಾದಿಯು ನನ್ನ ಜೊತಗೆ ಒಂದು ಕರಾರುಅನ್ನು ಮಾಡಿಕೊಂಡಿದ್ದನು ಎಂದರೆ ಹೌದು. ದಿಃ 02-12-2004 ರಿಂದ 5 ವರ್ಷದ ವರೆಗೆ 2 ನೇ ಪ್ರತಿವಾದಿ ನನಗೆ ಜಮೀನಿನನ್ನು ಉಂಡು ಬಿಡುವುದು ಮಾಡಲು ಕೊಟ್ಟಿದ್ದನು ಎಂದರೆ ಹೌದು. ಸದರಿ ಕರಾರಿನ ಪ್ರಕಾರ ನಾನು ಸದರಿ ಜಮೀನನ್ನು ಉಳುಮೆ ಮಾಡುತ್ತಾ ಬಂದಿದ್ದೆನು ಎಂದರೆ ಹೌದು. ಸಾಕ್ಷಿಯು ಮುಂದುವರೆದು 2 ನೇ ಪ್ರತಿವಾದಿಯು ಸದರಿ ಜಮೀನನ್ನು ನನಗೆ ಕೊಡುವುದಾಗಿ ಹೇಳಿದ್ದನು ಎಂದು ನುಡಿಯುತ್ತಾರೆ. ಈ ರೀತಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಯು ಸದರಿ ಜಮೀನನ್ನು ನನಗೆ ಕೊಡುತ್ತಾನೆ ಎಂದು ನಿಪಿ-4 ರಲ್ಲಿ ಬರೆಯಿಸಿರುವುದಿಲ್ಲ. 5 ವರ್ಷಗಳಲ್ಲಿ ಯಾವ ಸ್ಥಿತಿಯಲ್ಲಿ ಜಮೀನು ಇರುತ್ತದೆಯೋ ಅದೇ ಸ್ಥಿತಿಯಲ್ಲಿ ಬಿಟ್ಟು

ಕೊಡುವುದು ಕರಾರು ಇತ್ತು ಎಂದರೆ ಸರಿಯಲ್ಲ. ಸದರಿ ಜಮೀನಿನಲ್ಲಿ ಕಬ್ಬನ್ನು ಬೆಳೆಯಲಾಗುತ್ತದೆ. ಸದರಿ ಜಮೀನು ನೀರಾವರಿ ಜಮೀನು ಎಂದರೆ ಹೌದು. 2007 ನೇ ಇಸವಿಯಲ್ಲಿ ನಾನು 2 ನೇ ಪ್ರತಿವಾದಿಯ ವಿರುದ್ದ ಅಸಲು ದಾವೆ ಸಂಖ್ಯೆ: 64/2007 ಹೂಡಿದ್ದೆನು ಎಂದರೆ ಹೌದು. ಸದರಿ ದಾವೆಯನ್ನು 2 ನೇ ಪ್ರತಿವಾದಿಯು 4 ಜನರನ್ನು ಕರೆದುಕೊಂಡು ಬಂದು ಸದರಿ ಜಮೀನನ್ನು ಮಾರಾಟ ಮಾಡುವುದಾಗಿ ಹೇಳುತ್ತಿದುದ್ದರಿಂದ ಹೂಡಿರುತ್ತೇನೆ.

2. ಅಸಲು ದಾವಾ ಸಂಖ್ಯೆ: 64/2007 ರಲ್ಲಿ ನ್ಯಾಯಾಲಯವು ನನಗೆ 2 ನೇ ಪ್ರತಿವಾದಿಯು ಬೇರೆಯವರಿಗೆ ಸದರಿ ಜಮೀನನ್ನು ಮಾರಾಟ ಮಾಡಲು ತಡೆಯಲು ಅಧಿಕಾರ ಇರುವುದಿಲ್ಲ ಎಂದು ಆದೇಶ ಮಾಡಿರುತ್ತದೆ ಎಂದರೆ ಸರಿಯಲ್ಲ. ಸದರಿ ಆದೇಶದಲ್ಲಿ ನ್ಯಾಯಾಲಯವು ನನಗೆ ಅವಧಿ ಮುಗಿದ ನಂತರ ಸದರಿ ಜಮೀನನ್ನು 2 ನೇ ಪ್ರತಿವಾದಿಗೆ ಬಿಟ್ಟು ಕೊಡಬೇಕು ಎಂದು ನಿರ್ದೇಶನ ನೀಡಿರುತ್ತದೆ ಎಂದರೆ ಸರಿಯಲ್ಲ. ಸದರಿ ಆದೇಶದಲ್ಲಿ 2 ನೇ ಪ್ರತಿವಾದಿಯು ನನಗೆ ಸದರಿ ಜಮೀನನಿಂದ ಹೊರಗೆ ಹಾಕುದಾಗಲೀ ಕಾನೂನು ಪ್ರಕಾರ ಹೊರಗೆ ಹಾಕಲು ತಿಳಿಸಿತ್ತು ಎಂದರೆ ಹೌದು. ನ್ಯಾಯಾಲಯದ ಆದೇಶವನ್ನು ನಾನು ಮಾನ್ಯ ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ನ್ಯಾಯಾಲಯವು ನನಗೆ ಜಮೀನನ್ನು ಬಿಡಬೇಡಿ ಎಂದು ಆದೇಶ ಮಾಡಿರುತ್ತದೆ ಎಂದು ನುಡಿಯುತ್ತಾರೆ. ನಂತರ 2 ನೇ ಪ್ರತಿವಾದಿಯು ನನಗೆ ಜಮೀನನ್ನು ಬಿಡಲು ಅಸಲು ಸಂಖ್ಯೆ: 30/2009 ಅನ್ನು ದಾಖಲಿಸಿದ್ದರು ಎಂದರೆ ಸರಿಯಲ್ಲ. ಅಸಲು ದಾವಾ ಸಂಖ್ಯೆ: 30/2009 ರಲ್ಲಿ ನನ್ನ ಪ್ರತಿವಾದ ಪತ್ರದಲ್ಲಿ ನಾನು ಸದರಿ ಜಮೀನು ಈಗಾಗಲೇ ಮಾರಾಟ ಮಾಡಲಾಗಿದೆ 2 ನೇ ಪ್ರತಿವಾದಿಗೆ ಕೇಳಲು ಹಕ್ಕು ಇರುವುದಿಲ್ಲ ಎಂದು ತಕರಾರನ್ನು ಸಲ್ಲಿಸಿರುತ್ತೇನೆ ಎಂದರೆ ಹೌದು. ಸದರಿ ದಾವೆಯಲ್ಲಿ 2 ನೇ ಪ್ರತಿವಾದಿಯು ಇನ್ನೊಂದು ದಾವೆಯನ್ನು ಹೂಡಲು ನ್ಯಾಯಾಲಯದ ಅನುಮತಿಯನ್ನು ಪಡೆದು ಸದರಿ ದಾವೆಯನ್ನು ಹಿಂಪಡೆದುಕೊಂಡಿರುತ್ತಾನೆ ಎಂದರೆ ಹೌದು. ಸದರಿ ದಾವೆಯನ್ನು ಹಿಂಪಡೆಯುವ ಕಾಲಕ್ಕೆ ನ್ಯಾಯಾಲಯವು ರೂ.1500/- ದಂಡ ಹಾಕಿತ್ತು ಎಂದರೆ ಹೌದು. ಸದರಿ ರೂ.1500/- ದಂಡವನ್ನು ನಾನು ತೆಗೆದುಕೊಂಡಿರುತ್ತೇನೆ ಎಂದರೆ ಹೌದು. ಪ್ರಸ್ತುತ ದಾವೆಯನ್ನು 2 ನೇ ಪ್ರತಿವಾದಿಯಿಂದ ಜಮೀನನ್ನು ಖರೀದಿಸಿದ ವಾದಿಯು ದಾಖಲೆ ಮಾಡಿರುತ್ತಾನೆ ಎಂದರೆ ಹೌದು. ಈ ದಾವೆಯನ್ನು ಹೂಡಿದ ನಂತರವು ಮತ್ತು ಹಿರಿಯರಿಂದ ಬುದ್ದಿವಾದ ಹೇಳಿಸಿದರು ಸಹ ನಾವು ಸದರಿ ಜಮೀನನ್ನು ಕಾನೂನು ಪ್ರಕಾರ ಬಿಟ್ಟು

ಕೊಟ್ಟಿರುವುದಿಲ್ಲ ಎಂದರೆ ಸಾಕ್ಷಿಯು ಜಮೀನನ್ನು ಬಿಟ್ಟು ಕೊಡಬೇಡಿ ಎಂದು ನ್ಯಾಯಾಲಯವು ಆದೇಶ ಮಾಡಿರುತ್ತದೆ ಎಂದು ನುಡಿಯುತ್ತಾರೆ. ನನ್ನ ಸಾಕ್ಷಿ ಪ್ರಮಾಣಪತ್ರದ ಮಾಹಿತಿಯನ್ನು ನಾನು ಕೊಟ್ಟಿದ್ದು , ನನ್ನ ಗಂಡ ಓದಿ ಹೇಳಿರುತ್ತಾರೆ. ವಾದಿಯು ಜಮೀನನು ಖರೀದಿ ಮಾಡುವ ಅಧಿಕಾರ ಇಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಾಕ್ಷಿ ಪ್ರಮಾಣಪತ್ರದಲ್ಲಿ ವಾದಿಗೆ ದಾವೆ ಮಾಡುವ ಹಕ್ಕು ಇಲ್ಲ ಎಂದು ಸುಳ್ಳು ಬರೆಯಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಜಮೀನಿನ ಕರವನ್ನು 2 ನೇ ಪ್ರತಿವಾದಿಯು ತುಂಬುತ್ತಾ ಬಂದಿದ್ದು ನಂತರ ವಾದಿಯು ಜಮೀನನ್ನು ಖರೀದಿಸಿದಾಗಿನಿಂದ ವಾದಿ ಕರ ತುಂಬುತ್ತಿದ್ದಾನೆ ಎಂದರೆ ನನಗೆ ಗೊತ್ತಿಲ್ಲ ನನ್ನ ಗಂಡನಿಗೆ ಗೊತ್ತಿರುತ್ತದೆ ಎಂದು ನುಡಿಯುತ್ತಾರೆ. 2004 ರಿಂದ 2009 ರವರೆಗೆ ಮಾತ್ರ ನನಗೆ ಸದರಿ ಜಮಿನಿನಲ್ಲಿ ಹಕ್ಕು ಇದ್ದು ತದನಂತರ ನಾನು ಬೇಕಾಯ್ದೆಶಿರ ಆಗಿ ಸದರಿ ಜಮೀನಿನಲ್ಲಿ ಕಬ್ಜೆಯಲ್ಲಿ ಇದ್ದೆನೆ ಎಂದರೆ ಸರಿಯಲ್ಲ. ಮಾರಾಟ ಮಾಡುವ ಹಕ್ಕು ಇಲ್ಲ ಎಂದು ಸುಳ್ಳು ಬರೆಯಿಸಿರುತ್ತೇನೆ ಎಂದರೆ ಸರಿಯಲ್ಲ.

3. 2 ನೇ ಪ್ರತಿವಾದಿಯ ತನ್ನ ಹೊಟ್ಟೆ ತುಂಬಲಾರದಕ್ಕೆ ತನ್ನ ಮಕ್ಕಳ ಜೊತೆಗೆ ಹುತ್ತೂರ , ಮಹಾರಾಷ್ಟ್ರ ದಲ್ಲಿ ಇದ್ದಾನೆ ಎಂದರೆ ಸಾಕ್ಷಿಯು 2 ನೇ ಪ್ರತಿವಾದಿಯು ಮೊದನಿಂದಲೂ ಆತನ ಮಕ್ಕಳೊಂದಿಗೆ ಇದ್ದಾನೆ ಎಂದು ನುಡಿಯುತ್ತಾರೆ. 2 ನೇ ಪ್ರತಿವಾದಿಯು ಸದರಿ ಜಮೀನನ್ನು ನನಗೆ ಮೊದಲು ಮಾರಾಟ ಎಂದು ಹೇಳಿರುತ್ತಾನೆ ಎಂದು ಸುಳ್ಳು ಬರೆಯಿಸಿರುತ್ತೇನೆ ಎಂದರೆ ಸರಿಯಲ್ಲ. ನಮ್ಮ ಜಮೀನು 1 ಎಕರೆ 18 ಗುಂಟೆ 2 ನೇ ಪ್ರತಿವಾದಿಯ ಜಮೀನಿನ ಪಕ್ಕದಲ್ಲಿ ಇರುತ್ತದೆ ಎಂದು ಸುಳ್ಳು ಬರೆಯಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಜಮೀನು ಹಾಗೂ ನನ್ನ 1 ಎಕರೆ 18 ಗುಂಟೆ ಜಮೀನನ್ನು ಎರಡು ಸೇರಿ ಉಳುಮೆ ಮಾಡುತ್ತೇನೆ ಎಂದು ಸುಳ್ಳು ಬರೆಯಿಸಿರುತ್ತೇನೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಯು ಜಮೀನದಲ್ಲಿ ನನಗೆ ಯಾವುದೇ ಕಾನೂನುಬದ್ಧ ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಾವಾ ಜಮೀನಿನಿಂದ ಒಟ್ಟು ಕಬ್ಬು 30 ಟನ್ ಆಗುತ್ತಿತ್ತು. 1 ಎಕರೆಯಲ್ಲಿ ಈಭಾಗದಲ್ಲಿ 40 ರಿಂದ 60 ಟನ್ ಬೆಳೆಯಲಾಗುತ್ತಿದ್ದು , 30 ಟನ್ ಅಂತ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಜಮೀನಿನಲ್ಲಿ ಎಷ್ಟು ಕಬ್ಬನ್ನು ಬೆಳೆದು ಎಷ್ಟು ಕಬ್ಬನ್ನು ಕಾರ್ಖಾನೆಗೆ ಕಳುಹಿಸಲಾಗಿದೆ ಎಂದು ತೋರಿಸಲು ದಾಖಲೆ ಇವೆ . ಸದರಿ ದಾಖಲೆಗಳನ್ನು ಮುಂದಿನ ದಿನಗಳಲ್ಲಿ ಹಾಜರುಪಡಿಸುತ್ತೇನೆ. 2009 ನೇ ಇಸವಿಯಿಂದ ಇಲ್ಲಿಯವರೆಗೂ ನಾನು ದಾವಾ ಜಮೀನಿನಲ್ಲಿ ಬೇಕಾಯ್ದೆಶಿರ ಇರುವುದರಿಂದ ವಾದಿಗೆ ಪ್ರತಿವರ್ಷ 2 ರಿಂದ 3 ಲಕ್ಷ ಲುಕ್ಸಾನ ಆಗಿರುತ್ತದೆ ಎಂದರೆ ಸರಿಯಲ್ಲ. ನಾನು ಸದರಿ ಜಮೀನಿನಲ್ಲಿ ಬೇಕಾಯ್ದೆಶಿರ ಇದುದ್ದರಿಂದ ವಾದಿಯು ಪ್ರತಿವರ್ಷ 1 ರಿಂದ 1.50 ಲಕ್ಷ ಧರಮ್ಯಾನ ಉತ್ಪನ್ನ ಕೇಳಿರುತ್ತಾನೆ ಎಂದರೆ ಸರಿಯಲ್ಲ. ಅದರಂತೆ ನ್ಯಾಯಾಲಯವು ಸದರಿ ಧರಮ್ಯಾನ ಉತ್ಪನ್ನ ಕುರಿತು ವಿಚಾರಣೆ ಮಾಡಬೇಕೆಂದು ಕೇಳಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಜಮೀನಿನಲ್ಲಿ ನಾನು ಕಾನೂನುಬದ್ಧವಾಗಿ ಕಬ್ಜೆಯಲ್ಲಿ ಇರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಯು ನನ್ನ ಗಂಡನನ್ನು ಕೇಳದೆ ಬೇರೆಯವರಿಗೆ ಮಾರಾಟ ಮಾಡಬಾರದು ಎಂದು ಸುಳ್ಳು ಬರೆಯಿಸಿರುತ್ತೇನೆ ಎಂದರೆ ಸರಿಯಲ್ಲ. ಜಮೀನದ ಉತಾರೆಗಳು ಬೇರೆ ಬೇರೆ ಇವೆ ಎಂದರೆ ಹೌದು. ನನ್ನ ಗಂಡ ಹಾಗೂ

ನನ್ನ ಗಂಡನ ಅಣ್ಣತಮ್ಮಂದಿರು ತಮ್ಮ ತಮ್ಮ ಜಮೀನನ್ನು ತಾವೇ ಉಳುಮೆ ಮಾಡುತ್ತಾರೆ ಎಂದರೆ ಹೌದು. ದಾವಾ ಜಮೀನಿನಲ್ಲಿ ನಾವು ಬೇಕಾಯ್ದೆಶಿರ ಇದ್ದು , ವಾದಿಗೆ ಲುಕ್ಸಾನ ಮಾಡುತ್ತಾ ಬಂದಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ವಾದಿಯು ನಮಗೆ ಯಾವುದೇ ರೀತಿ ಸಂಬಂಧ ಇಲ್ಲ ಎಂದು ನುಡಿಯುತ್ತಾರೆ. ವಾದಿಯು ನಮ್ಮನ್ನು ಕಾಯ್ದೆ ಪ್ರಕಾರ ಸದರಿ ದಾವಾ ಜಮೀನಿನಿಂದ ಹೊರಗೆ ಹಾಕಲು ಈ ದಾವೆಯನ್ನು ಹೂಡಿರುತ್ತಾನೆ ಎಂದರೆ ಸರಿಯಲ್ಲ. ದಾವಾ ಜಮೀನಿನಲ್ಲಿ ನನಗಾಗಲೀ ಮತ್ತು ನನ್ನ ಗಂಡನಿಗಾಗಲೀ ಯಾವುದೇ ಕಾನೂನಬದ್ದ ಹಕ್ಕು ಇಲ್ಲ ಎಂದರೆ ಸರಿಯಲ್ಲ. ವಾದಿಯ ನಮ್ಮ ವಿರುದ್ದ ಕಾನೂನುಬಾಹಿರ ದಾವೆಯನ್ನುಮಾಡಿರುವುದಿಲ್ಲ, ಕಾನೂನು ಪ್ರಕಾರ ಈ ದಾವೆಯನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ.

4. ನಿಪಿ-6 ರ ದಾವೆಯಲ್ಲಿ ನನ್ನ ಪಾಟೀ ಸವಾಲಿನಲ್ಲಿ ನಾನು ಕರಾರಿನ ಅವಧಿ ಮುಗಿದ ನಂತರ ದಾವಾ ಜಮೀನನ್ನು ಬಿಟ್ಟು ಕೊಡವುದಾಗಿ ಒಪ್ಪಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ವಾದಿಗೆ ವಿನಾಕಾರಣ ತೊಂದರೆ ಕೊಡುವ ಉದ್ದೇಶದಿಂದ ಖೊಟ್ಟಿ ಸಾಕ್ಷಿಪ್ರಮಾಣಪತ್ರವನ್ನು ಸಲ್ಲಿಸಿ ಖೊಟ್ಟಿ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಜಮೀನು ಕುರಿತು ಉಚ್ಚ ನ್ಯಾಯಾಲಯದಲ್ಲಿ ರಿಟ್ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಸದರಿ ರಿಟ್ ತಕರಾರನ್ನು ಹಿಡಿಯದೆ ವಜಾಗೊಂಡಿರುತ್ತವೆ ಎಂದರೆ ಸರಿಯಲ್ಲ. ನಾನು ವಾದಿಗೆ ತೊಂದರೆ ನೀಡುವ ದುರುದ್ದೇಶದಿಂದ ಸುಳ್ಳು ಪ್ರಮಾಣಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ಶ್ರೀ ಬಿ.ಎಂ.ಕೆ ವಕೀಲರು ಸಾಕ್ಷಿಗೆ ವಾದಿ ಪರ ವಕೀಲರು ಕೇಳಿದ ಪ್ರಶ್ನೆಯನ್ನು ಸಾಕ್ಷಿಗೆ ತಿಳಿಯುವ ಭಾಷೆ ಮರಾಠಿಯಲ್ಲಿ ಪ್ರಶ್ನೆಯನ್ನು ಕೇಳಿದ್ದು , ಸಾಕ್ಷಿಯು ಮರಾಠಿ ಉತ್ತರಿಸಿದ್ದನ್ನು ಕನ್ನಡಕ್ಕೆ ತರ್ಜುಮೆ ಮಾಡಿ ಹೇಳಿದ್ದು ಯತಾವತ್ತಾಗಿ ಬೆರಳಚ್ಚು ಮಾಡಲಾಗಿದೆ)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ,

Sd/-
**ಸಿವಿಲ್ ವ ಜೆ ಎಮ್ ಎಫ್ ಸಿ ನ್ಯಾಯಾಧೀಶರು,**
**ಬನಹಟ್ಟಿ**